■ ಹನಿ

# ಹೊಸ ವಿವಾದ



ಸಾಧನೆಯ ಹಾದಿಯಲ್ಲಿ ಕ್ರಮಿಸಿ ಖ್ಯಾತಿಯ ಉತ್ತುಂಗಕ್ಕೆ ಏರಿದವರನ್ನು ಎಲ್ಲರೂ ಪ್ರೀತಿಸುತ್ತಾರೆ. ಈ ಪ್ರೀತಿಯಲ್ಲಿ ಜಾತಿ, ಧರ್ಮ, ರಾಜಕೀಯ ಪಕ್ಷಗಳ ಒಡಕು ಇರುವುದಿಲ್ಲ. ಅವೆಲ್ಲವನ್ನೂ ಮೀರಿ ಜನರು ಅವರನ್ನು ಆರಾಧಿಸುತ್ತಾರೆ. ಆದರೆ ಆ ವ್ಯಕ್ತಿಗಳು ಅಕಸ್ಮಾತ್ ತಮ್ಮ ಜಾತಿ, ಧರ್ಮ, ಸ್ವಜನ ಅಥವಾ ತಮ್ಮ ರಾಜಕೀಯ ಪಕ್ಷ ಎಂದು ಯಾವುದೋ ಒಂದರ ಜತೆ ಗುರುತಿಸಿಕೊಳ್ಳುವಂತಹ ಹೇಳಿಕೆ ನೀಡಿದರೆ ಆ ಪ್ರೀತಿಯಲ್ಲೂ ಒಡಕು ಉಂಟಾಗುತ್ತದೆ. ಅದರಲ್ಲೂ ರಾಜಕೀಯ ತೀರಾ ಹೊಲಸೆದ್ದು ಹೋಗಿರುವ ಇವತ್ತಿನ ಸಂದರ್ಭದಲ್ಲಿ, ಎಲ್ಲ ವರ್ಗವಾರು ವಿಭಜನೆಗಳನ್ನೂ ಮೀರಿ ಬೆಳೆದ ಸೆಲೆಬ್ರಿಟಿಗಳು ರಾಜಕೀಯದವರ ಜತೆ ಗುರುತಿಸಿಕೊಳ್ಳುವಾಗ ಹೆಚ್ಚು ಎಚ್ಚರಿಕೆಯಿಂದ ಇರಬೇಕು. ಭಾರತದ ಅತ್ಯಂತ ಖ್ಯಾತಿವೆತ್ತ ಗಾಯಕಿ ಲತಾ ಮಂಗೇಶ್ಕರ್ ಈ ವಿಷಯದಲ್ಲಿ ಎಡವಿರುವುದು ಸ್ಪಷ್ಟಗೋಚರ.

ಪುಣೆಯಲ್ಲಿ ದೀನನಾಥ ಮಂಗೇಶ್ಕರ್ ಆಸ್ಪತ್ರೆಯ ಸಮಾರಂಭದಲ್ಲಿ ಭಾಗವಹಿಸಿದ್ದ ಬಿಜೆಪಿ ಮುಖ್ಯಮಂತ್ರಿ ನರೇಂದ್ರ ಮೋದಿಯವರನ್ನು ಲತಾ ದೀದಿ ಹಾಡಿ ಹೊಗಳಿದ್ದಾರೆ. ಅಷ್ಟೇ ಆಗಿದ್ದರೆ ಅದು ಸಜ್ಜನಿಕೆಯ ಕ್ರಮ ಎನ್ನಿಸಿಕೊಳ್ಳುತ್ತಿತ್ತೇನೋ. ಆದರೆ 'ದೇಶದ ಮುಂದಿನ ಪ್ರಧಾನಿಯಾಗಿ ಮೋದಿಯವರು ಶೀಘ್ರ ಆಯ್ಕೆ ಆಗಲಿ' ಎಂದು ಲತಾ ಮಾತನಾಡಿದ್ದೇ ವಿವಾದದ ಹುತ್ತಕ್ಕೆ ಹಾಲೆರೆದಂತಾಗಿದೆ. ಕಾಂಗ್ರೆಸ್‌ನ ಮೂರ್ಖ ನಾಯಕರೊಬ್ಬರು 'ಲತಾ ಅವರಿಗೆ ಕೇಂದ್ರ ನೀಡಿರುವ ಭಾರತ ರತ್ನ ಪ್ರಶಸ್ತಿ ಹಿಂತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದರು. ಅದನ್ನು ಬಿಜೆಪಿ ನಾಯಕರು ತೀವ್ರವಾಗಿ ಖಂಡಿಸಿದರು. ಪರ– ವಿರೋಧ ಗದ್ದಲದಲ್ಲಿ ಲತಾ ಒಂದು ಪಕ್ಷದ ಪರ ಎನ್ನುವುದೇ ದೊಡ್ಡ ಸುದ್ದಿಯಾಯಿತು.

ಅದರ ಬೆನ್ನಲ್ಲೇ ಲತಾ ದೀದಿಗೆ ಸಂಬಂಧಿಸಿ ಇನ್ನೊಂದು ವಿವಾದವಾಯಿತು. ಸರಕಾರ ತನ್ನ ತಂಗಿ ಉಷಾ ಮಂಗೇಶ್ಕರ್‌ರಿಗೆ ಪದ್ಮಪ್ರಶಸ್ತಿ ಕೊಡಲು ಲತಾ ದೀದಿ ಶಿಫಾರಸ್ಸು ಮಾಡಿದ್ದಾರೆ ಎನ್ನುವುದು ಈ ಹೊಸ ಸುದ್ದಿ. ಖ್ಯಾತಿವೆತ್ತವರು ಹೀಗೆ ತಮ್ಮವರಿಗೇ ಪ್ರಶಸ್ತಿಗೆ ಶಿಫಾರಸು ಮಾಡುವುದನ್ನು ಯಾರೂ ಮೆಚ್ಚುವುದಿಲ್ಲ. ಲತಾ ದೀದಿಯ ಬಗ್ಗೆಯೂ ಅನುಮಾನಗಳು ಸಹಜವಾಗಿಯೇ ವ್ಯಕ್ತವಾಗಿವೆ. ಸಾಮಾಜಿಕ ಜಾಲತಾಣದಲ್ಲಿ ಇದಕ್ಕೆ ಉತ್ತರ ನೀಡಿರುವ ಲತಾ ದೀದಿ, 'ಪ್ರತಿ ಸಲವೂ ಕೇಂದ್ರ ಸರ್ಕಾರ ಪದ್ಮ ಪ್ರಶಸ್ತಿ ನೀಡುವ ಸಂದರ್ಭದಲ್ಲಿ ನನಗೆ ಪತ್ರ ಬರೆದು ಸಲಹೆ ಕೇಳುತ್ತದೆ. ಈ ಸಲ ಹಾಗೆ ಕೇಳಿದಾಗ, ಸಮಾಜಸೇವಕ ರಾಜ್‌ಮಲ್ ಪರಾಖ್, ಬಾಲಿವುಡ್ ಗಾಯಕರಾದ ಸುರೇಶ್ ವಾಡ್ಕರ್ ಮತ್ತು ಉಷಾ ಮಂಗೇಶ್ಕರ್ ಹೆಸರುಗಳನ್ನು ಶಿಫಾರಸು ಮಾಡಿದ್ದೇನೆ. ಉಷಾ ನನ್ನ ತಂಗಿಯಾಗಿದ್ದೇ ತಪ್ಪೇ? ಕಳೆದ 50 ವರ್ಷಗಳಿಂದ ನೂರಾರು ಹಾಡುಗಳನ್ನು ಆಕೆ ಹಾಡಿದ್ದಾಳೆ. ಅದು ಸಾಧನೆಯಲ್ಲವೆ?' ಎಂದು ಪ್ರಶ್ನಿಸಿದ್ದಾರೆ. ಆದರೆ ಈ ಪ್ರಕರಣದಲ್ಲಿ ಲತಾ ದೀದಿಯನ್ನು ಸಮರ್ಥಿಸಲು ಬೇರೆ ಯಾರೂ ಯತ್ನಿಸಲಿಲ್ಲ ಎನ್ನುವುದು ಗಮನಾರ್ಹ. ಇನ್ನೊಂದೆಡೆ ಉಸ್ತಾದ್ ಅಮ್ಜದ್ ಅಲಿ ಖಾನ್ ತಮ್ಮ ಮಕ್ಕಳಾದ ಅಮಾನ್ ಮತ್ತು ಅಯಾನ್ ಅವರ ಹೆಸರನ್ನು ಪದ್ಮಪ್ರಶಸ್ತಿಗೆ ಶಿಫಾರಸ್ಸು ಮಾಡಿದ್ದೂ ಸುದ್ದಿಯಾಗಿದೆ. ಅದನ್ನು ಎತ್ತಿ ತೋರಿಸುವ ಮೂಲಕ ಕೆಲವರು ಲತಾ ದೀದಿಯವರನ್ನು ಸಮರ್ಥಿಸಲು ಯತ್ನಿಸಿದರೂ ಅದು ಫಲ ಕೊಟ್ಟಿಲ್ಲ. ಹಾಡಿ ಗೆಲ್ಲುವುದು ಸುಲಭ; ಆದರೆ ಮಾತನಾಡಿ ಗೆಲ್ಲುವುದು ಕಷ್ಟ! ಲತಾ ದೀದಿ ಈ ಪ್ರಕರಣಗಳಿಂದ ಹೊಸ ಪಾಠ ಕಲಿತರೆ ಒಳ್ಳೆಯದು. ●

# ಗೆದ್ದ ಮಡೊನ್ನಾ



ಗಾಯಕಿ, ಗೀತ ರಚನಕಾರ್ತಿ, ನಟಿ, ನರ್ತಕಿ, ನಿರ್ಮಾಪಕಿ, ಉದ್ಯಮಿ, ಕೊಡುಗೈ ದಾನಿ– ಹೀಗೆ ನೂರೆಂಟು ಅವತಾರಗಳುಳ್ಳ ಮಡೊನ್ನಾಗೆ ಈ ವರ್ಷವೂ ಗಳಿಕೆಯಲ್ಲಿ ಅಗ್ರಪಟ್ಟ ಲಭಿಸಿದೆ. ಕೆಲವು ವರ್ಷಗಳಿಂದ ಪ್ರತಿಯೊಂದು ವಿಷಯದಲ್ಲೂ ಇನ್ನೊಬ್ಬ ಗಾಯಕಿ ಲೇಡಿ ಗಾಗಾ ಜತೆಗೆ ಪೈಪೋಟಿಗೆ ಇಳಿದಿರುವ ಮಡೊನ್ನಾ, ಈ ವರ್ಷ (2012–13) ಜಗತ್ತಿನಲ್ಲೇ ಅತ್ಯಧಿಕ ಆದಾಯ ಗಳಿಸಿದ ಗಾಯಕಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಮಡೊನ್ನಾ ವರ್ಷದ ಗಳಿಕೆ 125 ದಶಲಕ್ಷ ಡಾಲರ್‌ಗಳಂತೆ! 80 ದಶಲಕ್ಷ ಡಾಲರ್ ಗಳಿಸಿರುವ ಲೇಡಿ ಗಾಗಾ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕಷ್ಟೆ ತೃಪ್ತಿ ಪಟ್ಟುಕೊಂಡಿದ್ದಾರೆ. ಮಡೊನ್ನಾ ವಿಶ್ವ ಸಂಗೀತ ಪ್ರವಾಸಕ್ಕೆ ಈ ವರ್ಷ ಅಂತಹ ಒಳ್ಳೆಯ ಪ್ರತಿಕ್ರಿಯೆ ಬಂದಿಲ್ಲವಾದರೂ, ಅದರಲ್ಲೂ 305 ದಶಲಕ್ಷ ಡಾಲರ್ ಗಳಿಸಿದ್ದಾರೆ. ಲೇಡಿ ಗಾಗಾ ಕೂಡಾ ವಿಶ್ವ ಪ್ರವಾಸ ಮಾಡಿದ್ದರೂ, ನಡುವೆ ಕಾಲಿನ ಮೂಳೆಗೆ ಏಟಾಗಿ ಅದು ಅರ್ಧಕ್ಕೆ ನಿಂತಿತು. ಹಾಗಾಗಿ ಆಕೆಯ ಪ್ರವಾಸದ ಗಳಿಕೆ 160 ದಶಲಕ್ಷ ಡಾಲರ್ ಅಷ್ಟೇ ಆಯಿತಂತೆ!

55ರ ಹರೆಯದ ಮಡೊನ್ನಾ ಇವತ್ತಿಗೂ ಜನಪ್ರಿಯತೆಯಲ್ಲಿ ಅಗ್ರಸ್ಥಾನವನ್ನು ಕಿರಿಯರಿಗೆ ಬಿಟ್ಟುಕೊಟ್ಟಿಲ್ಲ. ಸದ್ಯಕ್ಕೆ ಆಕೆಯ ಆಸ್ತಿಯ ಮೊತ್ತ 100 ಕೋಟಿ ಡಾಲರ್ ದಾಟಿದೆ! ಮಕ್ಕಳ ಪುಸ್ತಕ, ಫ್ಯಾಶನ್ ಡಿಸೈನಿಂಗ್, ಸುಗಂಧ ದ್ರವ್ಯ ಮಾರಾಟ, ಚಿತ್ರ ನಿರ್ಮಾಣ ಮುಂತಾಗಿ ಹಲವು ಕ್ಷೇತ್ರಗಳಲ್ಲಿ ಆಕೆ ಯಶಸ್ವಿ ಉದ್ಯಮಿಯೂ ಆಗಿದ್ದಾರೆ. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65